130(4)

"SATYAVADI" Founded 1917 Regd. No. M. 129

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟಿದ್ದು)

ಸಂಪುಟ 29 ಸಂಚಿಕೆ 16 | ಸೋಮವಾರ 1—10—45 | ಬಿಡಿ ಪ್ರತಿ 6 ಪೈ

ಮಳೆಯು ಬರಲಿಕ್ಕಾಗಿ ಪ್ರಾರ್ಥನೆ

ಚೈನಾದಲ್ಲಿ ಹುಜೆಕ್ಸಿಂಗ್ ಪ್ರಾಂತ್ಯದಲ್ಲಿ ಮಳೆಯಿಲ್ಲದೆ ಜನರು ಬಹಳ ತೊಂದರೆಗೀಡಾಗಿದ್ದಾರೆ. ಅದಕ್ಕಾಗಿ ನಾನಾ ದೇವನ ಪ್ರಾರ್ಥನೆಯನ್ನೂ ಉತ್ಸವವನ್ನೂ ಮಾಡಿದರು. ಆ ಉತ್ಸವಕ್ಕೆ ಚೈನಾ ಸರ್ಕಾರವು ಕೂಡ ಪ್ರತಿನಿಧಿಗಳನ್ನು ಕಳುಹಿಸಿತ್ತು. ಈ ವಾರ್ತೆ ವಿಶ್ವಾಸಕ್ಕಾಗಿ ಅಲ್ಲಿನ ಪತ್ರಿಕೆಗಳು ಟೀಕಿಸಿದವು ಆದರೆ ಏನು? ಮಾರನೇ ದಿನವೇ ಮಳೆಯು ಬಂದು ಜನರನ್ನು ಆನಂದ ಸಾಗರದಲ್ಲಿ ಮುಳುಗಿಸಿತು.

ಸತ್ಯಾರ್ಥ ಪ್ರಕಾಶ

ಸತ್ಯಾರ್ಥಪ್ರಕಾಶದಲ್ಲಿ ಆಕ್ಷೇಪಕರವಾದ ವಿಷಯಗಳನ್ನು ಸಿಂಧ್ ಸರ್ಕಾರದ ಆಕ್ಷೇಪಣೆಯಂತೆ ತೆಗೆದು ಹಾಕಿದೆ. ಕಾಂಗ್ರೆಸ್ಸರು ಪ್ರಚಾರಿಸಿರುವ ಅನೇಕ ವಿತಗ್ರಂಥಗಳಲ್ಲಿಯಾದ ಎಷ್ಟೋ ವಿಷಯಗಳನ್ನು ಬಹಿಷ್ಕರಿಸಬೇಕಾಗಿರುತ್ತದೆ.

ಅಮೇರಿಕ ಸೈನಿಕರು

ಆಕ್ರಮಿಸಲ್ಪಟ್ಟಿರುವ ಯುರೋಪು ರಾಜ್ಯದಲ್ಲಿ ಅಮೇರಿಕ ಸೈನಿಕರು ಅಸಹ್ಯವಾಗಿ ಪ್ರವರ್ತಿಸುತ್ತಿರುವರಂತೆ "ನಮ್ಮವರು ಸ್ತ್ರೀಯರನ್ನು ಹತ್ತಿರಕ್ಕೆ ಬರಮಾಡಿಕೊಳ್ಳುವುದರಲ್ಲಿ ಯಾವ ಬಗೆಯ ತಾರತಮ್ಯವನ್ನೂ ವ್ಯಕ್ತಪಡಿಸುವುದಿಲ್ಲ" ಎಂದು ಅಮೇರಿಕ ಲೇಖಕರೊಬ್ಬರು ಒರೆದಿದ್ದಾರೆ. 'ಅವರಿಗೆ ಆತ್ಮ ಗೌರವವಿಲ್ಲದಿದ್ದರೂ ನಮ್ಮ ದೇಶವನ್ನು ಗೌರವಿಸಲು ಅವರು ಕಲಿಯಬೇಕು' ಎಂದು ತಿಳಿಸಿರುತ್ತಾರೆ.

.....

ಬ್ರಹ್ಮ ವಿದ್ಯಾರ್ಥಿಗಳಿಗೆ ಸೌಕರ್ಯ

ವಂಗೋಲು ವೇದಶಾಸ್ತ್ರದ ಪಾಠಶಾಲೆಗೆ ಎಷ್ಟೊ ಮಂದಿ ಬ್ರಾಹ್ಮಣ ವಿದ್ಯಾರ್ಥಿಗಳನ್ನಾದರೂ ಸೇರಿಸಿಕೊಳ್ಳಲು ಏರ್ಪಾಡು ಮಾಡಿರುವರು. ಅವರಿಗೆಲ್ಲ ಉಚಿತವಾಗಿ ಭೋಜನ ಏರ್ಪಾಡು ಮಾಡುವುದು. ಕೆಲವರಿಗೆ ವಿದ್ಯಾರ್ಥಿವೇತನಗಳೂ ದೊರೆಯುವುವು.

.....

ನಾಡಿನ ಹಾಡು

ಈ ದಿವಸ ಸಂಜೆ ಪ್ರಿ ಕಾಮನ್ವೆಲ್ತ್ ಮಿಯವರ ಅಧ್ಯಕ್ಷತೆಯಲ್ಲಿ, ಶಾರದಾ ವಿಲಾಸ ಕಾಲೇಜಿನಲ್ಲಿ, ಶ್ರೀ ಮಾಡಿನ ಹಳ್ಳಿ ಶೇಷಾದ್ರಿ ಗೋಪಾಲಕೃಷ್ಣರವರು ನಾಡಿನ ಹಾಡಿನ ಹೆಜ್ಜೆಳಿಕೆಯನ್ನು ಬಿಚ್ಚಿ ವಿವರಿಸುವರು. ಸಕಲರಿಗೂ ಆಹ್ವಾನವಿದೆ.

ರಷ್ಯಾಕ್ಕೆ ದಾಹ ಹೆಚ್ಚುತ್ತಿದೆಯೇ?

ರಷ್ಯಾದ ದಾಹ

ಲಂಡನ್ನಿನಲ್ಲಿ ನಡೆಯುತ್ತಿರುವ ವಿದೇಶಾಂಗ ಮಂತ್ರಿಗಳ ಸಭೆಯಲ್ಲಿ ರಷ್ಯಾ ಈಗಾಗಲೇ ಮೆಡಿಟರೇನಿಯನ್ನಿನಲ್ಲಿ ಕೇಳಿರುವ ಹಕ್ಕಿನ ಜೊತೆ ಅಥವಾ ಅದರ ಬದಲು, ಕ್ಯಾಸ್ಪಿಯನ್ ಸಮುದ್ರದ ಪರ್ಷಿಯನ್ ಕೊಲ್ಲಿಯ ಮಧ್ಯೆ ಪರ್ಷಿಯಾ ಮೂಲಕ ಸ್ಥಳಾಧಿಕಾರ ಕೇಳಲಿರುವುದೆಂದು ಹೇಳಲಾಗಿದೆ.

ಬೊಂಬಾಯಿ ಗಲಭೆಗೆ?

ಬೊಂಬಾಯಿನ ಗಲಭೆಗೆ ಭಾರತೇತರ ಕೈವಾಡವೇನಾದರೂ ಇರುವುದೇ ಎಂದು ಪತ್ತೆಮಾಡಲು ಅಮೇರಿಕಾ ಸರ್ಕಾರದವರು ಬೊಂಬಾಯಿನ ತನ್ನ ಪ್ರತಿನಿಧಿಗೆ ತಿಳಿಸಿರುವುದಾಗಿ ವರ್ತಮಾನ

ಜಪಾನರ ಕೈವಾಡ

ಜಪಾನರ ಕೈವಾಡದಿಂದ ಇಂಡೋ ಚೈನಾದಲ್ಲಿ ಜಪಾನರು ಶರಣಾಗತರಾಗಿದ್ದರೂ ಪ್ರತಿಭಟನೆ ಚಳವಳವನ್ನು ಹೂಡುತ್ತಿರುವುದಾಗಿ ತರದಿ. ಸೈಗಾನಿಂದ ಸ್ವತಂತ್ರ ಚಳುವಳಕಾರರು ಮುನ್ನುಗ್ಗುತ್ತಾ ವಿಮಾನ ನಿಲ್ದಾಣ ರಸ್ತೆ ಭೇಧಿಸಿರುವರೆಂದೂ, ಇವರ ಮೇಲೆ ಭಾರತ ಸೈನಿಕರನ್ನು ಬಿಟ್ಟಿರುವರೆಂದು ಹೇಳಲಾಗಿದೆ. ದಂಗೆಕೋರರ ಮೇಲೆ ಜಪಾನು ಮಿತ್ರರಿಗೆ ಸಹಾಯ ಮಾಡಲು ನಿರಾಕರಿಸಿದರು

ಮಿತ್ರ ರಾಷ್ಟ್ರಗಳ ವಿನಾಶಕರಣೆ ನಡೆಸಿದ್ದಕ್ಕೆ ಜುಲ್ಮಾನೆ

ಮಿಡ್ಲ್ ಪುರದ ಕೊಲೀಜಿಯೆಟ್ ಸ್ಕೂಲಿನ ಮೇಲ್ತರಗತಿಗಳ ನಾಲ್ವರಲ್ಲಿನ ವಿದ್ಯಾರ್ಥಿಗಳು ಶ್ರೀ ಸಭಾಷ್ ಚಂದ್ರ ಬೋಸರ ನಿಧನ ದಿನಾಚರಣೆ ಪಾಲಿಸಿದ್ದಕ್ಕಾಗಿ ಪ್ರತಿಯೊಬ್ಬರಿಗೂ 1 ರೂ. ದಂಡ ವಿಧಿಸಲಾಗಿದೆಯೆಂದು ತಿಳಿಯುಬಂದಿದೆ.

ಬೂಚ್ಸೇ ಶತ್ರುವಾಯಿತು

ಬೆಲ್ಜಿಯಮ್ಮಿನ ಪೈಲ್ವಾರ್ಟ್ ರೋಜ ಸಲೋಸನು ಫ್ರಾನ್ಸಿನಿಂದ ತನ್ನ ಬೂಡ್ಸುಗಳಲ್ಲಿ ಮಾಣಿಕ್ಯಗಳನ್ನು ಮುಚ್ಚಿಟ್ಟುಕೊಂಡು ಹೋಗುತ್ತಿದ್ದುದನ್ನು ಪತ್ತೆ ಮಾಡಿರುವರು

ಶ್ರೀಮನ್ಮಹಾರಾಜರವರ ಸಂದೇಶ

'ಭಾರತದ ರಾಜಕೀಯ ಭವಿಷ್ಯ ವೇನೇಯಿರಲಿ, ಯುದ್ಧಾನಂತರ ಪ್ರಪಂಚದಲ್ಲಿ ತಮ್ಮೊಡನಿರುವ ಒಳದೇಶೀಯ ಮತ್ತು ಅಂತರರಾಷ್ಟ್ರೀಯ ಸಮಸ್ಯೆಗಳನ್ನೆಲ್ಲಾ ಎದುರಿಸಿ ನಿವಾರಿಸಲು ಭಾರತವೂ ಬ್ರಿಟನ್ನೂ ಸಹವರ್ತಿಸಲು ಬಹಳವಾದ ಅವಕಾಶವೂ ಪರಸ್ಪರ ಇಚ್ಛೆಯೂ ಇರುವುದು ಎಂಬುದರಲ್ಲಿ ಸಂಶಯವಿಲ್ಲ' ಎಂದು ನಮ್ಮ ಶ್ರೀಮನ್ಮಹಾರಾಜರವರು ಬ್ರಿಟನ್ನಿನ ಒಂದು ಪತ್ರಿಕೆಯ ವಿಶೇಷಸಂಚಿಕೆಗೆ ಕೊಟ್ಟ ಸಂದೇಶದಲ್ಲಿ ತಿಳಿಸಿರುವರು.

ಬೆಳಗಾಂ ಮ್ಯಾಜಿಸ್ಟ್ರೇಟರಾದ ಶ್ರೀ ತುಕೋಳರವರ ಕೋರ್ಟಿನಲ್ಲಿ ಕೆಲವು ಆಗಿರುವುದಾಗಿ ಕಂಡುಬಂದಿರುವುದಂತೆ. ಪೋಲೀಸರು ಮಹಜರ್ ಮಾಡಿದ್ದು ಒಂದು ಪೊಖದ್ದವೆಯಲ್ಲಿನ ಸೀರೆ ಮೊದಲಾದ ಮಾಲುಗಳು ಪಾಯವಾಗಿದೆಯಂತೆ

ಜಪಾನಿನಲ್ಲಿ ಯಾವುದೇ ಪ್ರಕಾರದ ಶಸ್ತ್ರಾಸ್ತ್ರಗಳನ್ನು ತಯಾರಿಸಿ ಕೂಡದೆಂದು ಜನರಲ್ ಮೇಕ್ಆರ್ಥರರು ಆಜ್ಞೆ ಮಾಡಿದ್ದಾರೆ.

ಶ್ರೀ ಚಂಗಲರಾಯರೆಡ್ಡಿಯವರು ಆ ಕ್ಟೋಬರ್ 2 ರಲ್ಲಿ ಯುರೋಪಿಗೆ ಪ್ರಯಾಣ ಮಾಡುವರು.

ಅಣು ಬಾಂಬು ರಹಸ್ಯವು ರಷ್ಯಾಕ್ಕೆ ತಿಳಿಯಕೂಡದೆಂದು ಬ್ರಿಟಿಷ್ ಪತ್ರಿಕೆಯೊಂದರ ವಾದ.

ಈ ವಾರದ ಭವಿಷ್ಯ

(ಓಂ ಜ್ಯೋತಿಷ್ಕರಿಂದ)

ಮೇಷ — ಪರಿಸ್ಥಿತಿಗಳು ಸ್ವಲ್ಪ ಅಸ್ಥಿರವಾಗಿರುತ್ತವೆ. ಆರೋಗ್ಯ ವಿಷಯದಲ್ಲಿ ಜಾಗರೂಕತೆಯಿಂದಿರಿ.

ವೃಷಭ — ವ್ಯಾಪಾರಾದಿಗಳಲ್ಲಿ ಸ್ವಲ್ಪ ಮುಂಜರಿಯುವಿರಿ. ಆರೋಗ್ಯವು ಒಂದೇರೀತಿಯಲ್ಲಿರುತ್ತದೆ.

ಮಿಥುನ — ಈ ವಾರದಲ್ಲಿ ಗ್ರಹಚಲನವು ನಿಮ್ಮ ಪರಿಸ್ಥಿತಿಗಳಲ್ಲಿ ಯಾವ ಬದಲಾವಣೆಯನ್ನೂ ಮಾಡಲಾರವು. ನಿಷ್ಪ್ರಯೋಜಕರಗಳಾದ ಯೋಚನೆಗಳಲ್ಲಿ ಚಿತ್ತವನ್ನು ಸೆಲೆಗೊಳ್ಳಿಸಬೇಡಿ.

ಕರ್ಕಾಟಕ — ಯತ್ನಕಾರ್ಯ ವಿಜಯ. ಶುಭವಾರ್ತೆ.

ಸಿಂಹ — ವ್ಯವಹಾರದಲ್ಲಿ ಉತ್ಸಾಹವಿರುತ್ತದೆ. ಆದರೆ ಫಲವು ಪೂರ್ಣವಾಗಿರುವುದಿಲ್ಲ.

ಕನ್ಯಾ — ದೊಡ್ಡವರ ಸಹವಾಸ ಸಿಕ್ಕುವ ಯೋಗವುಂಟು. ಪರಿಸ್ಥಿತಿಗಳು ಸಾಮಾನ್ಯವಾಗಿರುತ್ತದೆ.

ತುಲಾ — ವ್ಯಯ ಅಧಿಕ. ವ್ಯವಹಾರದಲ್ಲಿ ಸ್ವಲ್ಪ ತೊಂದರೆ.

ವೃಶ್ಚಿಕ — ನಿಮ್ಮ ಕಾಲಿನ ಮೇಲೆ ನೀವು ನಿಲ್ಲಿ. ಯಾವ ವಿಷಯದಲ್ಲೂ ಯಾರನ್ನೂ ನಂಬಬೇಡಿ.

ಧನಸ್ಸು — ಸಾಲಾ ಮಾಡಬೇಕಾಗಿ ಬರಬಹುದು. ವ್ಯವಹಾರದಲ್ಲಿ ಜಾಗ್ರತೆಯಿಂದ ವರ್ತಿಸಿರಿ.

ಮಕರ — ಆಪ್ತರೂ ಕೂಡ ಶತ್ರುಗಳಾಗಬಹುದು. ಮನಸ್ಸಿಗೆ ಹೆಚ್ಚು ಯೋಚನೆಯನ್ನು ಹಚ್ಚಿಕೊಳ್ಳಬೇಡಿ.

ಕುಂಭ — ಆರೋಗ್ಯಾಭಿವೃದ್ಧಿಯಿದೆ. ಶುಭಕಾರ್ಯಗಳ ಯತ್ನವೂ ಸಫಲವಾಗುವುದು.

ಮೀನ — ಇಷ್ಟಪೂರ್ತಿಯಾದಂತೆ ತೋರುವುದಾಗಲಿ, ಫಲವು ತೃಪ್ತಿಕರವಾಗಿರುವುದಿಲ್ಲ. ಧನಲೋಪವಿರುವುದಿಲ್ಲ ಹೊಸ ವ್ಯಾಪಾರಕ್ಕೆ ಕೈಹಾಕಬೇಡಿ. ಯೋಚನೆ ಮಾಡದೆ ಸಾಲವನ್ನು ಮಾಡಬೇಡಿ.

.....

ಇಂಗ್ಲೆಂಡಿನಲ್ಲಿ

ವಿವಾಹ ವಿಚ್ಛೇದನಗಳು

ಇಂಗ್ಲೆಂಡಿನಲ್ಲಿ ವಿವಾಹ ವಿಚ್ಛೇದನಗಳು ಬಹಳವಾಗಿ ಹೆಚ್ಚುತ್ತಿವೆ ಈ ವರ್ಷದ 12½50 ವಿಚ್ಛೇದನಗಳಾದವು. ಈ ವರ್ಷದ ಸಂಖ್ಯೆ 52000.

ಶ್ರೀ ಶಿವಾಜಿಯ

ಮೇಲಿನ ಆಕ್ಷೇಪಣೆ ವ್ಯಾಜ್ಯ

ಜೌಹರ್‌ಪುರದ ಪ್ಲೀಡರ್ ಎಸ್. ಟಿ ದಾವೂದ್ ಸೈಯದ್ ಖಾನ್ ಎಂಬಾತನು 'ರಿಯಲ್' ಶಿವಾಜಿ' ಎಂಬು ದೊಂದು ಪುಸ್ತಕವನ್ನು ಬರೆದು ಪ್ರಕಟಿಸಿದ್ದಾನೆ. ಅದರಲ್ಲಿ ಆತನು ಶ್ರೀ ಶಿವಾಜಿ ಮಹಾರಾಜನನ್ನು ಮತ್ತು ಆತನ ಮಾತೃಶ್ರೀಯರಾದ ಜೀಜಾಬಾಯಿಯವರನ್ನೂ ವಿಟಬಂದಂತೆ ದೂಷಿಸಿದ್ದಾನೆ. ಆ ದೋಷಾರೋಪಣೆಗಳು ಹೀಗಿವೆ —

ಶಿವಾಜಿಯು ಒಬ್ಬ ದರೋಡೆಕೋರ ಒಬ್ಬ ಕಳ್ಳ, ಒಬ್ಬ ಸಾಧಾರಣ ಚೋರ, ಒಂದು ನಾಯಿ : ಇಷ್ಟಕ್ಕೇ ನಿಲ್ಲಿಸದೆ ಶ್ರೀ ಜೀಜಿ ತಾಯಿಯವರಿಗೆ ಒಬ್ಬ ಪೋರ್ಚುಗೀಸನ ಸಂಬಂಧವಿತ್ತೆಂದೂ ಮತ್ತು ಈಕೆಯನ್ನು ಶ್ರೀ ಶಿವಾಜಿಯೇ ಅಪಜುಲಖಾನನನ್ನು ಉಡಚರಿಸಲಿಕ್ಕೆಂದು ಅವನ ಬಿಡಾರಕ್ಕೆ ಕಳಿಹಿಸಿದ್ದನೆಂದೂ ಅಲ್ಲಿ ಆಕೆಯು ಒಂದು ರಾತ್ರಿಯನ್ನು ಕಳೆದಳೆಂದು ಆ ಪತಿವ್ರತಾ ಶಿರೋಮಣಿಯ ಮೇಲೆ ಅಕ್ಷನ್ಯವಾದ ದೋಷಾರೋಪಣೆ ಮಾಡಿದ್ದಾನೆ.

ಇಷ್ಟಕ್ಕೂ ತೃಪ್ತಿಗೊಳ್ಳದೆ ಶ್ರೀ ಶಿವಾಜಿಯ ಮೂಲವನ್ನು ಕುರಿತು ಉದಯಪುರದ ಮಹಾರಾಣಾನ ಒಬ್ಬ ಆತ್ಯಂತ ಕೀಳು ಜಾತಿಯ ಸೂಳೆಯ ಮಗ ಬಾಗಸಿಂಗ್ ಎಂಬವನ ವಂಶಜನೆಂದು ಸಹಾ ಅವಹೇಳನ ಮಾಡಿದ್ದಾನೆ.

ಹಿಂದೂ ಸಮಾಜ, ಹಿಂದೂ ಧರ್ಮ, ಹಿಂದೂ ಸಂಸ್ಕೃತಿ ಇತ್ಯಾದಿಗಳನ್ನು ತನ್ನ ಶೌರ್ಯ, ಧೈರ್ಯ, ಪರಾಕ್ರಮಾದಿಗಳಿಂದ ಸಂರಕ್ಷಿಸಿ ಹಿಂದೂ ಸ್ವರಾಜ್ಯವನ್ನ ಸ್ಥಾಪಿಸಿದ ಆ ಶೂರ, ವೀರ ಶ್ರೀ ಛತ್ರಪತಿ ಶಿವಾಜಿ ಮತ್ತು ಪರಮ ಪೂಜ್ಯಳೂ ಧರ್ಮ ವಿಚಾರಾಯಣೆಯಲ್ಲಿ ಪುಣ್ಯಶ್ಲೋಕಿಯೂ ಆದ ಆತನ ಮಾತೃಶ್ರೀ ಜೀಜಾಬಾಯಿಯವರನ್ನೂ ಹೀಗೆ ದೂಷಿಸಿರುವುದು ಇಡೀ ಹಿಂದೂ ಜನಕ್ಕೇ ತುಂಬಾ ದುಃಖವೂ ಅಸಹನವಾದ ಆಗ್ರಹವೂ ಉಂಟಾಗಿದೆ.

ಇಂಥ ಧೈರ್ಯ, ಸಾಹಸಗಳು ಈತನಿಗೆ ಹೇಗೆ ಬಂದಿರಬಹುದೆಂಬ ಕಾರಣವನ್ನು ಹುಡುಕಲು ನಾವು ಒಹುದೂರ ಶ್ರಮಿಸಬೇಕಾಗಿರುವುದಿಲ್ಲ. ಹಿಂದೂ ಜನರ ಹೇಡಿತನ, ಅನೈಕವಾಕ್ಯ, ಅಂತಃಕಲಹ ಜಾತಿದ್ವೇಷಗಳೇ ಸಹಾಯಕಗಳಿಗಾಗಿ ಗುಂಡಾಗಳ ಪುಂಡಾಟಗಳು ದಿನೇದಿನೆ ಅಭಿವೃದ್ಧಿಗೊಳ್ಳುತ್ತಿವೆ. ಇದುಹಿಂದೂ ಜನರ ಸ್ವಯಂಕೃತಾಪರಾಧವು ಹೊರತು ಆನರ ತಪ್ಪಲ್ಲ ಇನ್ನಾದರೂ ನಮಗೆ ಬುದ್ಧಿ ಬರಬಹುದಲ್ಲವೇ ?

ಈಗ ಈ ಪುಸ್ತಕವನ್ನು ಮುಟ್ಟುಗೋಲು ಹಾಕಿಕೊಳ್ಳುವುದಕ್ಕೂ, ಮತ್ತು ಆ ಪುಸ್ತಕವನ್ನು ಬರದಾತನ, ಮುದ್ರಕನ ಹಾಗೂ ಪ್ರಕಾಶಕನ ಮೇಲೂ ಒಂದು ಲಕ್ಷ ರೂಪಾಯಿಗಳ ಮಾನನಷ್ಟದ ಪರಿಹಾರಕ್ಕೂ ಸಪಾ ಶ್ರೀ ಶಿವಾಜಿ ಮೆಮೊರಿಯಲ್ ಲೀಗಿನವರು ಜೌನಪುರದ ಶಿವಿಲ್ ಕೋರ್ಟಿನಲ್ಲಿ ದಾವಾಮಾಡಿರುತ್ತಾರೆ. ಇದರ ಬೆಂಬಲಕ್ಕಾಗಿ ಡಾ॥ಎಸ್ ಪಿ. ಮುಖರ್ಜಿ ಡಾ॥ ಎಂ ಆರ್. ಜಯಕರ್, ಆರ್.ಬಿ. ರಾಜರಾಜೇಂದ್ರ ಎಂ. ಎಸ್. ಶೀತೋಳೆಸಾಹೇಬ ಮಿಹಿರಚಂದಾಧೀವಾರ್, ಬೇಂಸ್ಟರ್ ಮಾನಸಿಂಗ್ ರಾಜಕುಮಾರ್ ಮುಂತಾದ ಮುಖಂಡರು ಕಂಕಣ ಬದ್ಧರಾಗಿ ನಿಂತಿದ್ದಾರೆ.

ಇನರಂತೆಯೇ ನಮ್ಮ ಕರ್ನಾಟಕ ಪ್ರಾಂತ್ಯದವರು ಈ ವ್ಯಾಜ್ಯಕ್ಕೆ ಬೆಂಬಲವನ್ನಿತ್ತರೆ ಉತ್ತರೋತ್ತರ ಪುಂಡಾಟಗಳಡಗಿ ವುದಲ್ಲದೆ ನಮ್ಮ ಕರ್ನಾಟಕದ ಹಿಂದೂಗಳಿಗೂ ಭೂಷಣವೂ ಶ್ರೇಯಸ್ಕರವೂ ಸಹಾ ಆಗುವುದರಲ್ಲಿ ಸಂದೇಹವಿಲ್ಲ.

ಈ ವೃತ್ತಾಂತವನ್ನು ಕರ್ನಾಟಕ ಪತ್ರಿಕಾ ಸಂಪಾದಕರೆಲ್ಲರೂ ತಮ್ಮ ಪತ್ರಿಕೆಗಳಲ್ಲಿ ಪ್ರಕಟಿಸಿ ಹಿಂದೂ ಸಮಾಜಕ್ಕೆ ಉಪಕಾರವನ್ನು ಮಾಡಬೇಕೆಂದು ಕೋರಿದೆ. (ತಾ॥ 16-9-45 ರ ಪುಣೆಯ ಮರಾಠ ಪತ್ರಿಕೆಯಿಂದ)

ಎಂ. ಆರ್. ಹನುಮಂತಯ್ಯ
(ನ ಸಂ) ಬೆಂಗಳೂರು

ಲಂಡನ್ ಸೆ 28— ರಷ್ಯಾದಲ್ಲಿ ಸ್ಟಾಲಿನ್ನರು ಅನಾರೋಗ್ಯದಿಂದಿರುವರೆಂದೂ ಯೂರೋಪು ಮತ್ತು ಪೆಸಿಫಿಕ್ ಸಮ್ಮೇಳನಗಳಾದನಂತರ ಅವರು ರಾಜೀನಾಮೆ ಕೊಡುವರೆಂದೂ, ತದನಂತರ ರಷ್ಯಾದ ಅಧಿಕಾರಕ್ಕಾಗಿ ಹೊಡೆದಾಟವಾಗುವುದೆ ದೂ, ಕ್ಯಾಥಲಿಕ್ ಹೆರಾಲ್ಡ್' ಪತ್ರಿಕೆಯ ಭವಿಷ್ಯವಾಣಿ !

ಂ ಂ

ಜರೂಸೆಲಂ ಸೆ 28— ಯೂರೋಪಿನಿಂದ ಬ್ರಿಟಿಷ್ 3 ನೇ ಸೈನ್ಯದ ಒಂದು ಪ್ಯಾರಾಚೂಟ್ (ಏವಾನಕೊಡೆ) ದಳವು ಒಂದಿರುವುದೆಂದೂ, ಅಕ್ಷಸಕ್ಷ ದೇಶಗಳಿಂದ ಯಹೂದ್ಯರು ನ್ಯಾಯ-ಬಾಹಿರ ರೀತಿಯಲ್ಲಿ ಪ್ರವೇಶಮಾಡದಂತೆ ತಕ್ಕ ಕಾರ್ಯಕ್ರಮ ನಡೆಸಲು ಕರೆಸಲ್ಪಟ್ಟಿರುವರೆಂದೂ ಹೇಳಲಾಗಿದೆ.

ವಾರ್ತಾತರಂಗ

ಸಂಯುಕ್ತ ಸಂಸ್ಥಾನಗಳ ರಿಸರ್ಚ್ ಇಂಜಿನಿಯರ್ ಆಫ್ ಇಂಜನಿಯರಾದ ರಾಲ್ಫ್ ಲೂಕಾಸರವರು, ಪರಮಾಣು ಶಕ್ತಿಯಿಂದ ರೈಲ್ವೇ ಇಂಜನ್ನುಗಳನ್ನು ಓಡಿಸಲು ಸಾಧ್ಯವೆಂದೂ, ಉಕ್ಕು ಮತ್ತು ಪಾದರಸಗಳಲ್ಲಿರತಕ್ಕ ಪರಮಾಣು ಶಕ್ತಿಯನ್ನು ಕೇಂದ್ರೀಕರಿಸಿ, ಮೊದಲು ನ್ಯೂಯಾರ್ಕ್ ಸೆಂಟ್ರಲ್ ರೈಲ್ವೆಗಳಲ್ಲಿ ಪ್ರಯೋಗಕವಾಗಿ ಉಪಯೋಗಿಸಲಾವುದೆಂದೂ, ಒಂದು ಟೀ ಕಪ್ಪಿನಲ್ಲಿ ಹಿಡಿಸುವಷ್ಟು ಪಾದರಸ ಪರಮಾಣುಗಳು ನ್ಯೂಯಾರ್ಕಿನಿಂದ ಸ್ಯಾನ್‌ಫ್ರಾನ್ಸಿಸ್ಕೊವಿಗೆ 45 ಸಲ ರೈಲ್ವೇಗಾಡಿಗಳನ್ನು ಎಳೆದು ತರಲು ಶಕ್ತಿಯನ್ನೊಳಗೊಂಡಿದೆ ಎಂದು ಹೇಳಿದ್ದಾರೆ.

ಂ ಂ

ಇನ್ನು ಹದಿನಾರು ವರ್ಷಗಳನಂತರ ಸೂರ್ಯ ದೇವನು ಕಣ್ಮರೆಯಾಗುತ್ತಾನೆಂದು ಬ್ರಿಟಿನಿನ ಸರ್ ಹೆರಾಲ್ಡ್ ಸ್ಪೆನ್ಸರ್ ಜೋನ್ಸ್ ಎಂಬುವರು ಭವಿಷ್ಯ ಹೇಳಿರುತ್ತಾರೆ ಪ್ರತಿ ಕ್ಷಣಕ್ಕೂ ನಾಲ್ವತ್ತು ಲಕ್ಷ ಟನ್ ಕಾಯವನ್ನು ಸೂರ್ಯಗ್ರಹ ಕಳಕೊಳ್ಳುತ್ತಿದೆ ಎಂಬ ಆಧಾರದ ಮೇಲೆ ಹೇಳಿದ ಭವಿಷ್ಯವಿದು.

ಂ ಂ

೧೯೪೯ ನೇ ವರ್ಷದಲ್ಲಿ ಜರ್ಮನಿಯ ಪತನವಾಗುವುದೆಂಬ ಭವಿಷ್ಯ ಒಂದುಕಲ್ಲಿನ ಮೇಲೆ ಇನ್ನೂರು ವರ್ಷಗಳ ಹಿಂದೆಯೇ ಬರೆಯಲ್ಪಟ್ಟಿತ್ತು ಎಂಬ ನವೀನ ಶೋಧನವೊಂದು ಇತ್ತೀಚಿಗೆ ಬೆಳಕು ಕಂಡಿದೆ. ಬರ್ಲಿನ್ ಪ್ರಾಂತದ ಫರ್ಟ್‌ನ್ ವಾಲ್ಡಿಸ್ ಎಂಬಲ್ಲಿಯಿದೆ. ೧೬೦೦ ಟನ್ನಿನ ಆ ದೊಡ್ಡ ಬಂಡೆ ಕಲ್ಲು, ೧೭೪೫ ರಲ್ಲಿ ಆ ಕಲ್ಲಿಗೆ ಮಿಂಚು ಬಡೆದು ಅದು ಇಬ್ಭಾಗವಾಗಿತ್ತು. ಆಗಲೇ ಜರ್ಮನ್ ಪತನದ ಭವಿಷ್ಯ ಅದರಲ್ಲಿ ಕೊರೆಯಲ್ಪಟ್ಟಿತ್ತು. ಕಲ್ಲಿಗೆ ಮಿಂಚು ಬಡೆದ ಎರಡು ಶತಮಾನದಲ್ಲಿ ಜರ್ಮನಿಯು ಪತನವಾಗುವದೆಂದು ಅದರಲ್ಲಿಸ್ಪಷ್ಟವಾಗಿ ಬರೆದಿದೆ.

ಂ ಂ

ಅಣು ಬಾಂಬಿನ ಸಂಶೋಧನಕ್ಕೆ ಕಾರಣವಾಗಿರುವ ದೇಶಗಳಲ್ಲಿ ಫ್ರೋಲೆಂಡೂ ಸೇರಿರುವುದು ಅಣು ಬಾಂಬು ತಯಾರಿಸುವುದಕ್ಕೋಸ್ಕರ ಈ ವರ್ಷ ತಾಳಲಕ್ಷ ಪೌಂಡು ಖರ್ಚುಮಾಡಲು ಫ್ರೋಲೆಂಡು ನಿರ್ಧರಿಸಿದೆ.

ಟೋಕಿಯೋದಲ್ಲಿ ಮೆಕ್‌ಆರ್ಥರರನ್ನು ತಾ ॥ 27 ರಲ್ಲಿ ಜಪಾನ್ ಚಕ್ರವರ್ತಿ ಹಿರೋಹಿಟೋರವರು ಭೇಟಿ ಮಾಡಿ ಅರ್ಧಘಂಟೆಗಳ ಕಾಲ ಮಾತು ಕತೆ ನಡೆಸಿದರು.

ಂ ಂ

ಜರ್ಮನ್ ನೌಕಾ ಸಡೆಗಳು ರಷ್ಯಾ ಬ್ರಿಟನ್ನು ಸಂ. ಸಂಸ್ಥಾನ ಈ ಮೂರು ರಾಷ್ಟ್ರಗಳೂ ಸಮವಾಗಿ ಹಂಚಿಕೊಳ್ಳುವದೆಂದೂ, ಜಪಾನಿನ ನೌಕಾಪಡೆ ವಿಷಯ ಇನ್ನೂ ನಿರ್ಧಾರವಾಗಿಲ್ಲವೆಂದು ಗೊತ್ತಾಗಿದೆ.

ಂ ಂ

ಬ್ರಿಟನ್ನಿನಲ್ಲಿ 90 ರೂ. ಬೆಲೆಭಂಗಾರ ಯೂರೋಪಿನಲ್ಲಿ ಕಾಳ ಸಂತೆಯಲ್ಲಿ ರೂ. 390 ಕ್ಕೆ ಮಾರಾಟವಾಗುತ್ತಿದೆಯೆಂದು ಹೇಳಲಾಗಿದೆ.

ಂ ಂ

ಕಾಂಜೀವರದಲ್ಲಿ ಸಕ್ಕರೆ ಸರಪರಾಜು ಮಾಡುವ ರೀತಿನೀತಿ ಖಂಡಿಸಲು ಇಲ್ಲಿಯ ಹೋಟಲುಗಳು ಈ ದಿನದಿಂದ ಬಾಗಿಲು ಮುಚ್ಚಿವೆ.

ಂ ಂ

ಬೆಂಗಳೂರು, ಸೆ 27 — ಕಂಬತಿ ವಜ್ರಗಣಿಯವರು ಸರ್ ರಾಮನ್ನರಿಗೆ 19 ಆರಿಸಿ ತೆಗೆದ ಶ್ರೇಷ್ಠ ಆಫ್ರಿಕಾ ವಜ್ರಗಳ ಪರಿಶೋಧಿಸಲು ಕಳಿಸಿದ್ದಾರೆ.

ಂ ಂ

ಲಂಡನ್ ಸೆ 25— ಜಪಾನ್ ಚಕ್ರವರ್ತಿ ಹಿರೋಹಿಟೋರ ಸ್ವಂತ ಐಶ್ವರ್ಯ ಮತ್ತು ಕೈಗಾರಿಕೆ ಸಂಸ್ಥೆಗಳಲ್ಲಿ ಅವರಿಗೆ ಸೇರಿರುವ ಸಂಪತ್ತನ್ನು ಒಬ್ಬ ಸಂಯುಕ್ತ ಆಮೇರಿಕಾದ ನಿಪುಣನು ಪರಿಶೋಧಿಸಲಿರುವನೆಂದು ಹೇಳಲಾಗಿದೆ.

ಂ ಂ

ಫೂರಿ— ಇಲ್ಲಿ ನೆರೆಹಾವಳಿ ಹೆಚ್ಚಿದ್ದು 19 ಹಳ್ಳಿಗಳು ನೀರಿನಿಂದ ಆವರಿಸಲ್ಪಟ್ಟಿವೆ. ದೋಣಿಗಳಲ್ಲಿ ಓಡಾಟವಾಗಿದೆ.

ಂ ಂ

ಭಾರತಕ್ಕೆ ಮೊದಲು ಸ್ವಾತಂತ್ರ್ಯ ಕೊಡಿಸಬೇಕೆಂದು ಫೆನ್ನರ್‌ಬ್ರಾಕ್ವೆಯವರು ಅಟ್ಲಿಯವರನ್ನು ಒತ್ತಾಯಿಸಿರುವರು.

ಂ ಂ

ಅಸ್ಸಾಂ— ಅಸ್ಸಾಂಕೂಡ ಶಾಶ್ವತ ಸ್ಥಾನವನ್ನು ವಿರೋಧಿಸುವುದೆಂದು ಶ್ರೀ ಬಾರ್ಡೋಲಿಯವರು ಹೇಳಿದ್ದಾರೆ.

ಎ.ಐ.ಸಿ.ಸಿ. ಬಿಸಿ ಬಿಸಿ

(ನಮ್ಮ ಖಾಸಾ ಪ್ರತಿನಿಧಿಯಿಂದ)

ಮುಂಬಯಿ, ತಾ 24

ಸಿನಿಮಾ ನಟ ಪೃಥ್ವಿರಾಜ್ ವತ್ತ ಅವನ ಸಂಸ್ಥೆಯವರ ೧ ತೆಯೊಂದಿಗೆ ನಿನ್ನೆ ನಡುಹಗಲು ಎರಡು ಘಂಟೆಗೆ ಎ. ಐ. ಸಿ. ಸಿ. ಯ ಕೊನೇ ದಿನದ ಕಾರ್ಯಕ್ರಮಗಳು ಆರಂಭವಾದುವು ಆರಂಭದಲ್ಲೇ ಸದಸ್ಯರೊಬ್ಬರ ಆರ್ಥವಿಲ್ಲದ ಕ್ರಿಯಾಲೋಸವೊಂದು ಬಂತ. ನೆಹರೂರವರು ರೇಗಿ ಅದನ್ನು ತಳ್ಳಹಾಕಿಸಿದರು. ಬೆಲೂಚಿಸ್ಥಾನದ ಅಂಜುಮನ್ ನ ವರ್ತಕ ಕಾಂಗ್ರೆಸ್ ಸಂಸ್ಥೆಯೊಡನೆ ಐಕ್ಯವಾಯಿದೊಂದು ಇಂದಿನ ವಿಶೇಷ .

ಮೊನ್ನೆ ಪ್ರೆಸ್ ಗ್ಯಾಲರಿಯಲ್ಲಿ ಪ್ರೆಸ್‌ಗೆ ಸಂಬಂಧಿಸದ ಹೆಂಗಸರೂ ಮಕ್ಕಳೂ ಬಂದು ಕೂತಿದ್ದರು. ಅವರನ್ನು ಓಡಿಸಲು ಹಷೀಸಿಂಗ್‌ರು ಪಟ್ಟ ಪ್ರಯತ್ನವೆಲ್ಲಾ ವಿಫಲವಾಯಿತು.

ಅಸೆಂಬ್ಲಿ ಚುನಾವಣೆಗಳಾಂತ ಒಂದು ಠರಾವು ರಚಿಸಲಾಗಿತ್ತು. ಅದನ್ನು ರದ್ದುಗೊಳಿಸಿ ವೈಸರಾಯರ ಇತ್ತೀಚಿನ ವಾಣಿ ಮತ್ತು ಚುನಾವಣೆಗಳು ಎಂಬ ಠರಾವನ್ನು ವಲ್ಲಭಾಯಿಯವರು ಮಂಡಿಸಿದರು. ತಮ್ಮ ಭಾಷಣದಲ್ಲಿ ಚುನಾವಣೆ ಇಲ್ಲದೆ ನಡೆದುಬಂದ ಈ ಅಸಂಬ್ಲಿಗಳನ್ನು ಶವಕ್ಕೆ ಹೋಲಿಸಿದರು.

ಈ ಠರಾವಿಗೆ ತಿದ್ದುಪಡಿ ಸೂಚಿಸುತ್ತಾ ಕಮ್ಯೂನಿಸ್ಟ್ ಮಸೋಧರ್ಮದ ಮಹಮದ್ ಆಷ್ರಫ್ ಮತ್ತು ಮಿಯಾನ್ ಇಫ್ತಿಕಾರುದ್ದೀನ್‌ರು ಮಾತನಾಡಿ ಕಾಂಗ್ರೆಸ್ಸಿಗೆ ಮುಸ್ಲಿಂರ ಬೆಂಬಲ ಸಾಲದೆಂದೂ ಹೀಗೆ ಅವರ ಬೆಂಬಲ ಪಡೆಯುದಿರುವುದು ತಪ್ಪೆಂದೂ ಧ್ವನಿ ಎತ್ತಿದಾಗ ವೇದಿಕೆಯಲಿದ್ದ ನಾಯಕರು ಬಿಸಿಬಿಸಿಯಾದರು. ಎ ಐ ಸಿ.ಸಿ. ಅಧಿವೇಶನದಲ್ಲಿದ್ದ ಇತರೇ ಸದಸ್ಯರೂ ಕೋಪಗೊಂಡರು. ' ಕಮ್ಯೂನಿಸ್ಟರೇ ತೊಲಗಿ ' ಎಂಬ ಕೂಗಿಗೇ ಶುರು ಮಾಡಿಬಿಟ್ಟರು. ಕೊನೆಗೂ ಆ ಇಬ್ಬರು ಭಾಷಣಕಾರರೂ ಅರ್ಧದಲ್ಲೇ ಕೂರಬೇಕಾಯಿತು. ನೆಹರು ಮತ್ತು ಪಟೇಲ್ ತಮ್ಮ ಧೀರ ವೀರ ವಾಣಿಯಲ್ಲಿ ಅವರಿಗೆ ಉತ್ತರವಿತ್ತರು. ಕಾಂಗ್ರೆಸ್ಸಿಗೆ ಮುಸ್ಲಿಂರ ಬೆಂಬಲವಿದೆ ಲೀಗ್ ಮಾತ್ರ ಇಲ್ಲವೆನ್ನುತ್ತೆ. ನಾವು ಇನ್ನೆಂದಿಗೂ ಲೀಗ್ ಬಾಗಿಲಿಗೆ ಹೋಗುವುದಿಲ್ಲ ಲೀಗಿನೊಡನೆ ಹೋರಾಟವೇ ನಮ್ಮ ಮುಂದಿನ ಕಾರ್ಯ ಎಂದು ಹೇಳಿಬಿಟ್ಟರು.

ಕೊನೆಯಲ್ಲಿ ಅಧ್ಯಕ್ಷ ಆಜಾದ್‌ರವರು ಸರಳ ಹಿಂದೂಸ್ಥಾನಿಯಲ್ಲಿ ಧಾರಾಕಾರವಾಗಿ ಹದಿನೈದು ನಿಮಿಷ ಮಾತನಾಡಿ ಭಾರತೀಯರ ಹೃದಯದಲ್ಲಿ ಪ್ರಜ್ವಲಿಸುತ್ತಿರುವ ಸ್ವಾತಂತ್ರ್ಯ ಜ್ವಾಲೆಯನ್ನು ಜಗತ್ತಿನಲ್ಲಿ ಯಾವ ಜಗಲಿ ಆವ ಸಂಸ್ಥೆಯೇ ಆಗಲಿ ಯಾವ ಸರ್ಕಾರವೇ ಆಗಲೀ ನಾಶಗೊಳಿಸಲಾರದು ಎಂದು ಘೋಷಿಸಿದರು ಇವರ ಭಾಷಣದ ಬಿಸಿಬಿಸಿ ಎಲ್ಲರನ್ನೂ ಅನಂಬಗೊಳಿಸಿತು.

ಸ್ವಾರಸ್ಯವಾದ ಸುದ್ದಿಗಳು

ದಕ್ಷಿಣ ಆಫ್ರಿಕಾದ ಡರ್ಬನ್ನಿನಲ್ಲಿ ಒಬ್ಬ ಸ್ತ್ರೀ ನಾಲ್ಕು ಮಕ್ಕಳನ್ನು ಒಟ್ಟಿಗೆ ಹೆತ್ತಿರುವಳು. ಎಲ್ಲಾ ಹೆಣ್ಣು.

೦ ೦

ಲಾಹೋರಿನ ಒಂದು ಮುಸ್ಲಿಂ ಸಭೆಯಲ್ಲಿ ಅಹರಾರ್ ಮುಖಂಡರಾದ ಮೌ|| ಮಿಸೌಹರಾಲಿಯವರು, ಎಂ || ಜಿನ್ನಾರವರು ತಾವು ಮುಸ್ಲಿಂರಲ್ಲರೆಂದು 1918 ರಲ್ಲಿ ತಮ್ಮ ಮುದುವೆ ಕಾಲದಲ್ಲಿ ಹೇಳಿರುವರೆಂದೂ, ಅವರು ಮುಸ್ಲಿಂರ ಮುಖಂಡರಾಗಿರಲು ಅರ್ಹರಾಗಿಲ್ಲವೆಂದೂ ಹೇಳಿರುವರು.

೦ ೦

ಕಾರ್ಕಪುಂದ ಮುನಿಸಿಪಾಲಿಟಿಯವರು ಸೂಳೆಗಾರಿಕೆಗ ಲೈಸೆನ್ಸ್ ಜಾರಿಗೆ ತರಲಿರುವರೆಂದೂ, ಅದಕ್ಕೆ ವರ್ಷಕ್ಕೆ 60 ರೂ ಫೀಜು ವಿಧಿಸುವರೆಂದೂ ಒಂದು ವರದಿ ತಿಳಿಸುತ್ತದೆ.

೦ ೦

ಅಮೇರಿಕಾದ 16 ವರ್ಷದ ಬಿಲ್ ಸ್ಟೌಟ್ ಎಲ್ ಎಂಬಾತನು ಚಲನಚಿತ್ರ ಅತ್ಯಂತ ಹೆಚ್ಚಾಗಿ ನೋಡಿದನರಲ್ಲಿ 1 ನೇ ನಂಬರ್. ಈತನು 1944 ನೇ ಮಾರ್ಚಿ 4 ರಿಂದ 1945 ನೇ ಮಾರ್ಚಿ 4 ರವರೆಗೆ 705 ಚಿತ್ರಗಳನ್ನ ನೋಡಿರುವನಂತೆ.

೦ ೦

ತಮ್ಮ ಸೈನಿಕ ಗಂಡಂದಿರಿಗೆ ಆವಿದೇಯ ರೀತಿ ವರ್ತಿಸುವ ಎಲ್ಲಾ ಅನೇಕ ಕಪ್ಪು ಸ್ತ್ರೀಯರ ತಲೆಯನ್ನು ಬೋಳಿಸಬೇಕೆಂದು ಅಮೇರಿಕ ಆಫ್ರಿಕಾ ಹಾಡುಗಾರಕಳಾದ ಗ್ರೇಸ್ ಮೂರ್ ಹೇಳಿರುತ್ತಾಳೆ.

೦ ೦

ಬ್ರಿಟಿಷ್ ಹುಡಗಿಯರು ಪ್ರಪಂಚದಲ್ಲೆಲ್ಲಾ ಒಳ್ಳೆ ಚೆನ್ನಾಗಿ ಮುತ್ತು ಕೊಡುವುದರಲ್ಲಿ ಅಗ್ರಗಣ್ಯರೆಂದು ಅಮೆರಿಕ ಸೋಲ್ಜರುಗಳು ಅಭಿಪ್ರಾಯ ಪಟ್ಟಿರುವರಂತೆ.

೦ ೦

ಇನ್ನು ಹತ್ತು ವರ್ಷಗಳಲ್ಲಿ ಭಾರತವು ಪ್ರಸಿದ್ಧ ರಾಷ್ಟ್ರವಾಗುವುದೆಂದು ಸರ್ ರಾಮಸ್ವಾಮಿಯವರು ಕಲ್ಕತ್ತಾದಲಿ ಮಾಡಿದ ಭಾಷಣದಲ್ಲಿ ತಿಳಿಸಿದರು.

೦ ೦

ಜಾವಾ ದ್ವೀಪವು ಸ್ವತಂತ್ರ ರಾಜವೆಂದೂ, ಇನ್ನು ಮುಂದೆ ಸ್ವತಂತ್ರವಾಗಿರುವುದೆಂದೂ ಘೋಷಿಸಿರುವರು.

ವರ್ತಮಾನ ಸಂಗ್ರಹ

——

ಜಪಾನರು ಬರ್ಮಾ ತಾಯಿಲ್ಯಾಂಡಿನ ರೈಲ್ವೆ ಕಟ್ಟುವಲ್ಲಿಗೆ ಕಡೇ ಪಕ್ಷ 150000 ತಮಿಳು ಕೂಲಿಗಳೂ ಹತರಾದುದಲ್ಲದೆ 10 ಸಾವಿರ ಮಿತ್ರ ಯುದ್ಧ ಖೈದಿಗಳೂ ಪ್ರಾಣನೀಗಿದರೆಂದೂ ಹೇಳಲಾಗಿದೆ.

೦ ೦

ವಾಸ್ಕೋ ಪ್ರವಾಡಾ ಪತ್ರಿಕೆಯ ಸೇವೆಯನ್ನು ಪ್ರಶಂಸಿಸಿ, ಸ್ಟಾಲಿನ್ನರು ಆ ಪತ್ರಿಕೆಗೆ ' ಆರ್ಡರ್ ಆಫ್ ಲೆನಿನ್ ' ಪ್ರಶಸ್ತಿ ಕೊಟ್ಟು ಗೌರವಿಸಿರುವರು.

೦ ೦

ರಾಯಲ್ ಇಂಡಿಯನ್ ನೇವಿಯಲ್ಲಿ ಏಪ್ರಿಲವೊಳಗೆ ಒಂಭತ್ತು ಸಾವಿರ ಮಂದಿ ವಿಸರ್ಜಿಸಲ್ಪಡುವುದಾಗಿ ಹೇಳಲಾಗಿದೆ.

೦ ೦

ನೆಹರೂ ನಿಧಿಗೆ ಕೆನಿಯಾ ಭಾರತೀಯರು ಇಪ್ಪತ್ತು ಸಾವಿರ ರೂಪಾಯಿಗಳನ್ನು ಕೊಟ್ಟಿರುತ್ತಾರೆ.

೦ ೦

ಗಾಂಧೀಜಿ ಕಲ್ಕತ್ತವನ್ನು ನವೆಂಬರ ೨೬ಕ್ಕೆ ತಲುಪುವರೆಂದೂ ಬಂಗಾಳದಲ್ಲಿ ಒಂದು ತಿಂಗಳು ಪ್ರವಾಸ ನಡೆಸುವರೆಂದೂ ಪ್ರಕಟವಾಗಿದೆ.

೦ ೦

ಬ್ಯಾಂಕಾಂಕಿನಲ್ಲಿ ಎರಡು ಸಾವಿರ ಮಂದಿ ನ್ಯಾಷನಲ್ ಆರ್ಮಿಯ ಜನಗಳಿರುವರು.

೦ ೦

ಭಾರತದ ಕಾಗೆ ಭಂಗಾರವನ್ನು ಬ್ರಿಟನ್ನಿಗೆ ಸರಬ್ರಾಜು ಮಾಡುವ ಯೋಜನೆ ಲಂಡನ್ನಲ್ಲಿ ತಲೆದೋರಿದೆ.

೦ ೦

ಬೆಂಗಳೂರು ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸಿಗೆ ಮೂರು ಮಂದಿ ಬ್ರಿಟೀಷ ವಿಜ್ಞಾನಿಗಳು ಬಂದಿದ್ದಾರೆ.

೦ ೦

ಅಮೇರಿಕಾವೊಂದೆ ಜಪಾನಿನ ಮೇಲೆ ಆಡಳಿತ ನಡೆಸುತ್ತಿರುವುದು ರಷ್ಯಾಕ್ಕೆ ಅಸಂತೃಪ್ತಿಯಾಗಿದೆ.

೦ ೦

ಯೂರೋಪಿನಲ್ಲಿ ಈ ಚಳಿಗಾಲದಲ್ಲಿ ಕ್ಷಾಮ ಪ್ರಾಪ್ತಿಯಾಗಿ 30 ಲಕ್ಷ ಮಂದಿ ಮರಣ ಹೊಂದಬಹುದೆಂದು ಒಂದು ಊಹಾಪೋಹ.

ಜಾವಾ ಸ್ವತಂತ್ರ ರಾಜ್ಯವಾಗಬೇಕೆಂದೂ ಡಚ್ಚರ ಆಡಳಿತ ಕೂಡದೆಂದೂ ಅಲ್ಲಿ ನಿವಾಸಿಗಳು ಹೊರಂಟಿದ್ದು, ಆಗಲೇ ಮುಖಂಡರು ಮಂತ್ರಿಮಂಡಲ ಸ್ಥಾಪಿಸಿ ಬಿಟ್ಟಿರುವರು. ಅಲ್ಲಿ ಶರಣಾಗತರಾದ ಜಪಾನೀಯರನ್ನು ಕುರಿತು ರಾಜ್ಯವನ್ನು ಅವರಿಗೆ ಒಪ್ಪಿಸಬಾರದೆಂದು ಮೌಂಟ್ ಬ್ಯಾಟನ್ನರು ಆಜ್ಞೆ ಮಾಡಿದ್ದಾರೆ.

ಈಜಿಪ್ಟಿನ ಮುಖಂಡರು ಹೊರಡಿಸಿದ ಬ್ರಿಟೀಷ ಸೈನ್ಯ ಈಜಿಪ್ಟಿನಿಂದ ಹೊರಟು, ಅಂಗ್ಲೋ ಈಜಿಪ್ಟಿನ ಕರಾರು ಒಪ್ಪಂದದಂತಾಗಬೇಕೆಂಬ ವಿಷಯದಲ್ಲಿ ಬ್ರಿಟನ್ನು ಈಗ ಸಕಾಲವಲ್ಲದ್ದರಿಂದ ಈಜಿಪ್ಟ ಬಿಡುಲ್ಲವೆಂದು ಲಂಡನ ವಾರ್ತೆ.

ಭಾರತವು ಸ್ವತಂತ್ರವಾದೊಡನೆ ಕಾಂಗ್ರೆಸ್ ವಿಸರ್ಜನೆಯಾಗುವುದೆಂದು ಸರದಾರ್ ಪಟೇಲರು ನುಡಿದಿರುವರು

ಇಂಡಿಯನ್ ನ್ಯಾಷನಲ್ ಆರ್ಮಿ ಜನರು ಚಕ್ರವರ್ತಿಗಳ ವಿರುದ್ಧ ಯುದ್ಧ ಹೂಡಿದರೆಂಬ ಆಪಾದನೆಗೆಗಾಗಿ ವಿಚಾರಣೆಗೊಳಗಾಗುವರೆಂದೂ, ವಿಚಾರಣೆ ಬಹಿರಂಗವಾಗಿ ನಡೆಯುವುದೆಂದೂ, ಆ ಆಪಾದಿತರ ರಕ್ಷಣೆ ಬಗ್ಗೆ ದೇಸಾಯಿ, ಸಪ್ರೂ, ಜಯಕರರು ಮೇಲ್ವಿಚಾರಣೆ ನಡೆಸುವರೆಂದೂ ತಿಳಿಯಬಂದಿದೆ.

ಮದರಾಸಿನಲ್ಲಿ ಈ ವರ್ಷ ಜರುಗುವ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಶ್ರೀ ಟಿ. ಪಿ. ಕೈಲಾಸಂರವರು ಅಧ್ಯಕ್ಷರಾಗುವರೆಂದು ತಿಳಿಯಬಂದಿದೆ

ಲಂಡನ್ ಸೆ 16— ಪ್ರಥಮ ಜರ್ಮನ್ ಸೈನ್ಯದ ಸೇನಾನಿ ಜ || ಕೆನ್ಸ್ಲಾ ಡೊಯಿನಾರಾಲನ್ನು ದಸ್ತಗಿರಿ ಮಾಡಲು ಮೆಕ್ಕಾರ್ಥರ್‌ರ ಆಜ್ಞೆಯಾಗಿದೆ.

ಬೊಂಬಾಯಿನಲ್ಲಿ ನಡೆಸಿದ ಪತ್ರಿಕಾ ಸಮ್ಮೇಳನದಲ್ಲಿ, " ಭಾರತವನ್ನು ಬಿಟ್ಟ ಹೊರಡಿರಿ " ಎಂಬ ಅಂಶದ ಮೇಲೆ ಕಾಂಗ್ರೆಸ್ ಚುನಾವಣಾ ಕಾರ್ಯಕ್ರಮ ಏರ್ಪಡಿಸಲಾಗುವುದೆಂದು ಶ್ರೀ ಜವಹರಲಾಲರು ತಿಳಿಸಿದರು.

ಸಿಂಗಪುರದಲ್ಲಿ ಜಪಾನರನ್ನು ಓಡಿಸಿದನಂತರ ಇದೇ ಮೊದಲಾಗಿ ತಾ || 16 ರಲ್ಲಿ 8 ಬ್ಯಾಂಕುಗಳು ತೆರೆಯಲ್ಪಟ್ಟವು. ಇವುಗಳಲ್ಲೆರಡು ಭಾರತೀಯವು. ಹಿಂದಿನ ಸಾಲಿಗಳಿಗೆಲ್ಲ ವಾಯಿದೆ ಕೊಟ್ಟು ವ್ಯವಹಾರ ಆರಂಭವಾಗಿದೆ.

ಜಪಾನಿನ ವೇಲಿ ಜಂಟಿ ಅಧಿಕಾರ ವಿರಬೇಕೆಂದು ಲಂಡನ್ ಕಾನ್ಫರೆನ್ಸಿನಲ್ಲಿ ರಷ್ಯಾ ಕೇಳುವುದಂತೆ.

ಸುಖ ಆರೋಗ್ಯ ಆನಂದದಾಯಕ



ಜೀವಿತಕ್ಕೆ

ಸ್ವೀಮರ್ ಮಾರ್ಕಿನ ಉತ್ಕೃಷ್ಟ
ಹಿಂಗಿನ ಪುಡಿ ಉಪಯೋಗಿಸಿ.

ಈ ಹಿಂಗಿನ ವುಡಿಯು ಅತ್ಯಂತ ಪರಿಶುದ್ಧವಾದುದು. ನೀರನ್ನು ಸೇರಿಸದೇ ತಯಾರಿಸಲ್ಪಟ್ಟಿದೆ. ಅತಿ ಘನವಾದ ಗುಣವುಳ್ಳದ್ದು. ಎಲ್ಲಾ ಸನಾತನ ಸಂಸಾರಗಳಲ್ಲಿ ಉಪಯೋಗಿಸಲು ಅರ್ಹವಾದುದು. ಒಂದು ಚಿಕ್ಕ ಚಿಟಿಕೆಯಷ್ಟನ್ನು ತಯಾರಿಸುತ್ತಿರುವ ಆಹಾರ ಪದಾರ್ಥಗಳಲ್ಲಿ ಹಾಕಿದಲ್ಲಿ ದೀರ್ಘವಾದ, ಸುಮನೋಹರವಾದ ವಾಸನೆಯನ್ನು ಕಲ್ಪಿಸುವುದಲ್ಲದೆ, ಹೆಚ್ಚು ರುಚಿಯನ್ನುಂಟು ಮಾಡುತ್ತದೆ. ಎಲ್ಲಾ ಶರೀರ ವ್ಯಾಧಿಗಳಿಗೂ ಒಂದು ಸಂಪೂರ್ಣ ಔಷಧದಂತಿದೆ. ಒಂದು ಸಾರಿ ಉಪಯೋಗಿಸಿದ್ದಲ್ಲಿ ನಂಬಿಕೆಯನ್ನುಂಟು ಮಾಡುವುದಲ್ಲದೆ, ಸದಾ ಅದನ್ನು ಉಪಯೋಗಿಸುವಂತೆ ಮನಗೊಳಿಸುವುದು. ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ಒಂದು, ಅರ್ಧ, ಕಾಲು ಪೌಂಡು ಪುತ್ತು ಒಂದು ಪಲಂ ಪ್ಯಾಕೆಟ್ಟುಗಳಲ್ಲಿ ದೊರೆಯುತ್ತದೆ. ಬೆಲೆ ಒಂದು ಪೌಂಡಿಗೆ ರೂ. 3-8-0 ಮಾತ್ರ.

ನಮ್ಮ ಸುಘಂದ ಅಡಿಕೆಪುಡಿ ಒಂದು ವೈಶಿಷ್ಟ್ಯ.

ನಮ್ಮ ಶ್ರೀ ಓಂ ಗುರುತಿನ ಕೇಸರಿ ಅತ್ಯಂತ ಪರಿಶುದ್ಧವಾದ ಖಾತರಿಯಾದುದು. ವಿವರಂಗಳಿಗೆ ಮತ್ತು ಕ್ಯಾಂಪಲಿಗೆ ಬರೆಯಿರಿ —

ವಲ್ಲಭದಾಸ್ ತೇಜ್‌ಪಾಲ್,
(ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)
೧೪. ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸು.

☞ EVENING SHOWS

From 26-9-45
AT Opera—
Ali Baba &
Forty Thieves
(in Technicolor)
Featuring—
MARIA MONTEZ
JON HALL
TURHAN BEY
Daily 3 Shows

At Ranjit
Humayun
4 ನೇ ವಾರ
ರಣಜಿತ್ ಟಾಕೀಸಿನಲ್ಲಿ
.... ಹುಮಾಯೂರ್....
(ಹಿಂದಿ)
ಅಶೋಕ ಕುಮಾರ್, ಚಂದ್ರಮೋಹಕ
ವೀಣಾ, ನರ್ಗಿಸ್, ಮತ್ತು ನವಾಸ
ಪಾತ್ರವಹಿಸಿರುವರು

For Good Printing
L. N. Press
Sriramp at MYSORE



ಐ. ಜೆ. ಹಾಲ್
ಅಶೋಕ ರಸ್ತೆ — ಮೈಸೂರು

Edited, Printed and published by M. S. Krishna Rao, at the Satvavadi Press, Chamaraja Agrahar, Mysore

ರಕ್ತವೃದ್ಧಿಗೆ — ಧಾತುಪುಷ್ಟಿಗೆ

ಶಕ್ತಿಸುಧಾ

॥ ಜಯಜಯರಘುವೀರಸಮರ್ಥ ॥

॥ಶ್ರೀ ಸದ್ಗುರು ಬ್ರಹ್ಮಚೈತನ್ಯ ಪರಬ್ರಹ್ಮಣೇನಮಃ ॥

ನವ್ಹೇಕರ್ಮನಾಧರ್ಮನಾಯೋಗಕಾಹೀ ।
ನವ್ಹೇಭೋಗನಾತ್ಯಾಗನಾಸಾಂಗವಾಹೀ ॥
ವ್ಹಾಣೇದಾಸವಿಶ್ವಾಸನಾಮೀಧರಾವಾ ।
ಪ್ರಭಾತೇಮನೀರಾಮಚಿಂತೀತಜಾವಾ ॥

ಮೈಸೂರು ಸಿಟಿ ಕೃಷ್ಣಮೂರ್ತಿಪುರದಲ್ಲಿ ಸ್ಥಾಪಿತವಾಗಿರುವ

ಶ್ರೀ ಸಮರ್ಥ ನಾರಾಯಣಾಶ್ರಮದಲ್ಲಿ

ಮೂವತ್ತಾಲು ಪ್ರಕಾರ ಇದೇ ಶ್ರೀ ಪಾರ್ಥಿವನಾಮ ಸಂ ॥ ಆಶ್ವಯುಜ ಶುದ್ಧ ಪಾಡ್ಯಮಿ ಭಾನುವಾರ ಅಹಗಾಯ್ತು (ತಾ ೭ಮು 7-10-1945)

—॥ ಅಖಂಡ ಶ್ರೀರಾಮಜಪ ಸಪ್ತಾಹ ॥—

ಮಹೋತ್ಸವವು ಪ್ರಾರಂಭವಾಗಿ ತಾ ॥ 14-10-1945 ನೇ ಭಾನುವಾರ ಮಹಾನುಂಗಳಾರತಿಯೂ ತತ್ಸಂಬಂಧವಾದ ಭಗವತ್ಸೌಂಕರ್ಯಗಳೂ ನಡೆಯಬೇಕಾಗಿ ಶ್ರೀ ಸದ್ಗುರು ಸಮರ್ಥನಾರಾಯಣ ಮಹಾರಾಜರವರ ಆಜ್ಞೆಯಾಗಿರುವುದರಿಂದ ಭಗವದ್ಭಕ್ತರಾದ ತಾವು ದಯಮಾಡಿಸಿ ಶ್ರೀರಾಮರ ಸೇವೆಯಲ್ಲಿ ಭಾಗಿಗಳಾಗಬೇಕಾಗಿ ಪ್ರಾರ್ಥಿಸುವ, ಭಕ್ತಮಂಡಲಿ.

ತಾ ॥ 24-9-45 ಶ್ರೀ ಸಮರ್ಥನಾರಾಯಣಾಶ್ರಮ

ಮೈಸೂರು 1331, ಕೃಷ್ಣಮೂರ್ತಿಪುರಂ, ಮೈಸೂರು.

ಮೈ ಜ ॥ ಬಾರ್ಡಿಗರು ರಾಜ್ಯ ಒಂದಲ್ಲ ಗಳನ್ನು ಸತ್ಕರಿಸುತ್ತಿರುವುದು